(ಗೊಂದಲ)

ಅಧ್ಯಕ್ಷರು : ಇಲ್ಲ ಅನ್ನುವ ಸ್ಥಿತಿಯಿಂದ ಪುನಃ ಪರಿಶೀಲಿಸುತ್ತೇವೆಂದು ಒಂದು ಹೆಜ್ಜೆ ಹಿಂದಕ್ಕೆ ಬಂದಿದ್ದಾರೆ. ಸರ್ಕಾರದ ಮನ ಒಲಿಸೋಣ. ತಾವು ದಯಮಾಡಿ ಸಹಕರಿಸಿ ಅನಂತರ ಹೇಳಿ. ಅವರು ಪುನಃ ಪರಿಶೀಲನೆ ಮಾಡುತ್ತೇನೆಂದು ಒಪ್ಪಿಕೊಂಡಿದ್ದಾರೆ. ಆದ್ದುದರಿಂದ ನಾವು ಒಪ್ಪಿಸೋಣ.

ಅಧ್ಯಕ್ಷರು ವಿರೂಪಾಕ್ಷಪ್ಪನವರೇ, ತಮ್ಮ ಪ್ರಶ್ನೆ 1834 ಸರ್ಕಾರದವರು ಒಂದು ವಾರ ಸಮಯ ಕೇಳಿದ್ದಾರೆ. ವಿಷಯ ಸಮಿತಿ ವರಿದಿ ಬಂದಮೇಲೆ ಮತ್ತೆ ನಾವು ಮೇ ತಿಂಗಳಲ್ಲಿ ಸೇರುತ್ತೇವೆ. ಆಗ ಉತ್ತರ ಕೊಡಿಸೋಣ.

ಶ್ರೀ ಕೆ. ವಿರೂಪಾಕ್ಷಪ್ಪ : ನನ್ನ ಯಾವ ಪ್ರಶ್ನೆಗೂ ಉತ್ತರ ದೊರಕುತ್ತಿಲ್ಲ.

ಅಧ್ಯಕ್ಷರು : ನಾನು ಮುನಿಸಿಪಾಲಿಟಿ ಕಟ್ಟಡಗಳದ್ದು, ಎಪಿಎಂಸಿ. ಯದ್ದು ಎಲ್ಲಾ ಕೊಡಿಸಿದ್ದೇನೆ.

ಶ್ರೀ ಕೆ. ವಿರೂಪಾಕ್ಷಪ್ಪ : ಅದು ಒಂದು ಬಿಟ್ಟರೆ ಉಳಿದ ಯಾವ ಪ್ರಶ್ನೆಗಳಿಗೂ ಉತ್ತರ ದೊರಕಿಲ್ಲ. 5-6 ಚುಕ್ಕೆ ಗುರುತಿನ ಪ್ರಶ್ನೆಗಳಿವೆ. ಅವುಗಳಲ್ಲಿ ಒಂದಕ್ಕೂ ಉತ್ತರ ಬಂದಿಲ್ಲ.

ಅಧ್ಯಕ್ಷರು : ಮೇ ತಿಂಗಳಲ್ಲಿ ತರಿಸಿಕೊಡುತ್ತೇನೆ.

ವಿಷಯ : ನಗರಗಳಲ್ಲಿರುವ ಕಾನ್ವೆಂಟ್ ಶಾಲೆಗಳು ಮೀಸಲಾತಿ ನಿಯಮ ಪಾಲಿಸದೇ ಇರುವುದು.

222 (1765)-ಶ್ರೀ ಹೆಚ್. ಡಿ. ಬಸವರಾಜ್ (ವೀರಾಜಪೇಟೆ) : ಮಾನ್ಯ ಪ್ರಾಥಮಿಕ ಮತ್ತು ಪೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ನಗರಗಳಲ್ಲಿರುವ ಅನುದಾನಿತ ಮತ್ತು ಅನುದಾನರಹಿತ ಕಾನ್ವೆಂಟ ಶಾಲೆಗಳಿಗೆ ಸರ್ಕಾರ ಮನ್ನಣೆ ನೀಡಿದ್ದು ಈ ಶಾಲೆಗಳಲ್ಲಿ ಮೀಸಲಾತಿ ಅನ್ವಯ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ದಾಖಲಾತಿ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಸರ್ಕಾರದ ಮೀಸಲಾತಿ ನಿಯಮ ಪಾಲಿಸದೆ ಶಾಲೆಗಳ ಮೇಲೆ ಯಾವ ಕ್ರಮ ಕೈಗೊಳ್ಳಲಿದೆ ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಕರ್ನಾಟಕ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಆದೇಶ ಹಾಗೂ ಭಾರತದ ಸಂವಿಧಾನ 15(4)ನೇ ಅನುಚ್ಛೇದದ ಅಡಿಯಲ್ಲಿ ರಾಜ್ಯದ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಪಂಗಡಗಳ ವಿದ್ಯಾರ್ಥಿಗಳಿಗೆ ಅನುಕ್ರಮವಾಗಿ ಶೇ.15 ಮತ್ತು ಶೇ.3ರಷ್ಟು ದಾಖಲಾತಿಗೆ ಅವಕಾಶ ನೀಡಲಾಗಿದೆ. ದಾಖಲಾತಿಯಲ್ಲಿನ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ನೀಡದೆ ಇರುವ ಯಾವುದೇ ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಮೀಸಲಾತಿ ನಿಯಮ ಪಾಲಿಸದ ಶಾಲಾ ಕಾಲೇಜುಗಳ ಮೇಲೆ ಸರ್ಕಾರದ ಆದೇಶದ ರೀತ್ಯ ಕಠಿಣ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಹೆಚ್. ಡಿ. ಬಸವರಾಜು : ನನ್ನ ಪ್ರಶ್ನೆಯಲ್ಲಿ ಏನು ಕೇಳಿದ್ದೇನೆಂದರೆ ನಗರಗಳಲ್ಲಿರುವ ಅನುದಾನಿತ ಮತ್ತು ಅನುದಾನರಹಿತ ಕಾನ್ವೆಂಟ್ ಶಾಲೆಗಳಿಗೆ ಸರ್ಕಾರ ಮನ್ನಣೆ ನೀಡಿದ್ದು ಈ ಶಾಲೆಗಳಲ್ಲಿ ಮೀಸಲಾತಿ ಅನ್ವಯ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ದಾಖಲಾತಿ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಎಂದು. ಅದಕ್ಕೆ ಇವರು ಏನು ಹೇಳುತ್ತಿದ್ದಾರೆಂದರೆ, ಭಾರತ ಸಂವಿಧಾನದ 15ನೇ ಅನುಚ್ಛೇದದಲ್ಲಿ ಅಳವಡಿಸಿದೆ ಎಂದು ಹೇಳಿದ್ದಾರೆ. ನಾನು ಶಿಕ್ಷಣ ಸಚಿವರಲ್ಲಿ ಕೇಳುವುದೇನೆಂದರೆ, ಅವರ ಇಲಾಖೆಯಲ್ಲಿ ಅವರ ಇನ್ಸ್‌ಪೆಕ್ಟರ್‌ಗಳು ಇರುತ್ತಾರೆ. ಸಾಮಾನ್ಯವಾಗಿ ಪ್ರಾಯೋಗಿಕವಾಗಿ ಯೋಚನೆ ಮಾಡಬೇಕಾದ ದೃಷ್ಟಿಯಿಂದ ಹೇಳುತ್ತಿದ್ದೇನೆ. ನಾನು ಯಾರನ್ನೂ ತಪಾಸಣೆ ಮಾಡುತ್ತಿಲ್ಲ.....

ಅಧ್ಯಕ್ಷರು : ನೀವು ಬುದ್ಧಿವಂತಿಕೆಯಿಂದ ಇರಬೇಕು. ಇದು ನಮ್ಮ ನಿಮ್ಮ ಬುದ್ಧಿಶಕ್ತಿ ಪರೀಕ್ಷೆಯ ಸಮಯ. ನಿಮ್ಮ ಪ್ರಶ್ನೆಗೆ ಸರ್ಕಾರ ಉತ್ತರಿಸಿದೆ. ಎರಡನೆಯ ಉತ್ತರದಲ್ಲಿ ಏನು ಹೇಳಿಬೇಕೆಂದರೆ, ಇಂಥ ಶಾಲೆ ಇದೆ; ಎ.ಬಿ.ಸಿ. ಇಂಥದ್ದರಲ್ಲಿ ಅವರು ನಿಯಮ ಪಾಲನೆ ಮಾಡಿಲ್ಲವೆಂದರೆ ಇವರು ಕ್ರಮಕೈಗೊಳುತ್ತಾರೆ. ಅದು ಬಿಟ್ಟು ಸಾರ್ವತ್ರಿಕವಾಗಿ ಮಾತನಾಡಿದರೆ ಪ್ರಯೋಜನವಾಗುವುದಿಲ್ಲ.

ಶ್ರೀ ಹೆಚ್. ಡಿ. ಬಸವರಾಜು : ನಾನು ಏಕೆ ನಿರ್ದಿಷ್ಟವಾಗಿ ಹೇಳುವುದಕ್ಕೆ ಹೋಗುತ್ತಿಲ್ಲವೆಂದರೆ, ಯಾವುದಾದರೂ ಒಂದೆರಡು ಶಾಲೆಗಳಲ್ಲಿ ನಿಯಮಪಾಲನೆ ಮಾಡತ್ತಿಲ್ಲ ವೆಂದರೆ ನಾನು ಒಂದು, ಎರಡು ಎಂದು ಪಟ್ಟಿ ಕೊಡಬಹುದು. ಆದರೆ ಈಗ ಇರುವಂಥ ಎಲ್ಲಾ ಶಾಲೆಗಳಲ್ಲೆ ಎಲ್ಲಿಯೂ ನಿಯಮ ಪಾಲನೆಯಾಗುತ್ತಿಲ್ಲ. ಇದು ಸತ್ಯಸಂಗತಿ. ಅದಕ್ಕೋಸ್ಕರ ನಾನು ಈ ರೀತಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು : ನೀವು ಹೊಸ ಸದಸ್ಯರು. ನಿಮ್ಮನ್ನು ತರಬೇತಿ ಮಾಡಬೇಕೆಂಬ ಉದ್ದೇಶದಿಂದ ನಾನು ತಮಗೆ ಹೇಳುವುದು. ಇದು ಒಂದು ಕೋರ್ಟಿನಲ್ಲಿ ಟ್ರೈಯಲ್ ನಡೆದ ಹಾಗೆ. ನೀವು ಅವರನ್ನು ಹಿಡಿದುಕೊಳ್ಳಬೇಕು. ನಿಮ್ಮ ಹತ್ತಿರ ಮಾಹಿತಿ ಇಟ್ಟುಕೊಳ್ಳಬೇಕು. ನೀವು ಸಾರ್ವತ್ರಿಕವಾಗಿ ಮಾತನಾಡಿದರೆ ಅವರು ಕಠಿಣ ಕ್ರಮ ಕೈಗೊಳ್ಳುತ್ತೇವೆಂದು ಸಾರ್ವತ್ರಿಕವಾಗಿ ಹೇಳುತ್ತಾರೆ.

ಶ್ರೀ ಹೆಚ್. ಡಿ. ಬಸವರಾಜು : ಇದರಲ್ಲಿ ಇನ್ನೊಂದು ಪ್ರಶ್ನೆ ಉದ್ಭವವಾಗುತ್ತದೆ. ಯಾವುದಾದರೂ ಒಂದು ಗೊತ್ತಾದ ಶಾಲೆಯ ಹೆಸರನ್ನು ಹೇಳಿದರೆ ಆ ಜನಾಂಗದ ಬಗ್ಗೆ ಹೇಳುತ್ತಾರೆಂದು ನನ್ನ ಮೇಲೆ ಅಪವಾದ ಬರುತ್ತದೆ. ಆದ್ದರಿಂದ ಸೌಜನ್ಯಯುತವಾಗಿ, ಎಲ್ಲಾ ಜನಾಂಗದವರು ಈ ರೀತಿ ಮಾಡುತ್ತಿದ್ದಾರೆಂದು ನಾನು ಈ ಸದನದಲ್ಲಿ ಆರೋಪ ಮಾಡುತ್ತಿದ್ದೇನೆ.

ಅಧ್ಯಕ್ಷರು : ಸಾವಿರಾರು ಶಾಲೆಗಳು ಇವೆ. ಯಾರ ಶಾಲೆಯ ಮೇಲೆ ಕ್ರಮ ಕೈಗೊಳ್ಳುವುದು? ನೀವೇ ಗೋವಿಂದೇಗೌಡರ ಸ್ಥಾನದಲ್ಲಿದ್ದೀರಿ. ಅದೇ ಪ್ರಶ್ನೆಯನ್ನು ಇನ್ನೊಬ್ಬ ಸದಸ್ಯರು ನಿಮಗೆಕೇಳುತ್ತಾರೆ. ಸಾವಿರಾರು ಶಾಲೆಗಳು ಇರುವಾಗ ನೀವು ಯಾರ ಮೇಲೆ ಕ್ರಮ ಕೈಗೊಳ್ಳುತ್ತೀರಿ?

ಶ್ರೀ ಹೆಚ್. ಡಿ. ಬಸವರಾಜು : ನಾನು ಒಂದು ಉದಾಹರಣೆ ಕೊಡುತ್ತೇನೆ. ಮೆಷಿನರಿ ಶಾಲೆ ಎಂದು ಹೇಳುತ್ತಾರೆ. ಇಲ್ಲಿ ಮೆಷಿನರಿ ಶಾಲೆಗಳಲ್ಲಿ ಸರ್ಕಾರ ಅನುದಾನ ಕೊಡುತ್ತಿದೆ ಅಥವಾ ಅನುದಾನರಹಿತವಾಗಿ ನಡೆಸುತ್ತಿದೆ. ಆದರೆ ಸರ್ಕಾರ ಮಾನ್ಯತೆ ಮಾಡಿರುವುದರಿಂದ ಆ ಶಾಲೆಗಳಲ್ಲಿ ದಾಖಲಾತಿ ಪರಿಶೀಲನೆ ಮಾಡುವುದಕ್ಕೆ ಇವರಿಗೆ ಅಧಿಕಾರ ಇದೆ. : ಮಾನ್ಯತೆ ಕೊಡದೆ ಇರುವುದನ್ನು ಪತ್ತೆಹಚ್ಚಬಹುದು. ಪ್ರಶ್ನೆಯಲ್ಲಿ ಉತ್ತರ ಕೊಟ್ಟಿರುವಂತೆ ಮೀಸಲಾತಿನಿಯಮಪಾಲಿಸದ ಶಾಲಾ ಕಾಲೇಜುಗಳ ಮೇಲೆ ನೀವು ಕಠಿಣ ಕ್ರಮ ಕೈಗೊಳ್ಳುತ್ತೇವೆಂದು ಹೇಳುತ್ತೀರಿ. ಆದರೆ ನೀವು ಚೆಕ್ ಮಾಡಿದರೆ ತಾನೆ ಕ್ರಮ ಕೈಗೊಳ್ಳುವುದು. ಚೆಕ್ ಮಾಡಲಿಲ್ಲವೆಂದರೆ ಹೇಗೆ ಕ್ರಮ ಕೈಗೊಳ್ಳುತ್ತೀರಿ?

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಬಸವರಾಜು ಅವರು, ಎಲ್ಲಾ ಕಡೆ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಮೀಸಲಾತಿನೀಡಿಲ್ಲವೆಂದು ಹೇಳುತ್ತಾರೆ. ಇವರ ಆರೋಪ ಎಷ್ಟರಮಟ್ಟಿಗೆ ನಿಜ ಎಂಬುದನ್ನು ನೋಡೋಣ. ಬಹುತೇಕ ಎಲ್ಲಾ ಕಡೆ ಇದೆ ರೀತಿ ಅನ್ಯಾಯವಾಗಿದೆ ಎಂದು ಹೇಳುತ್ತಾರೆ. ಮುಂದಿನ ಸಾರಿಯಾದರೂ ವಿವರ ಕೊಡಿ, ವೇರಿಫೈ ಮಾಡಿಸೋಣ. ಕಠಿಣ ಕ್ರಮ ಕೈಗೊಳ್ಳುವುದಕ್ಕೆ ಅವರು ಕೂಡ ಒಪ್ಪಿದ್ದಾರೆ.

ಅಧ್ಯಕ್ಷರು : ಎಲ್ಲಾ ಅಧಿಕಾರಿಗಳಿಗೆ ಸುತ್ತೋಲೆ ಕಳುಹಿಸಿ ಎಲ್ಲಾ ಸಂಸ್ಥೆಗಳಲ್ಲಿ ಮೀಸಲಾತಿ ನಿಯಮ ಪಾಲನೆ ಮಾಡಿದ್ದಾರೆಯೇ ಎಂಬ ಬಗ್ಗೆ ಮಾಹಿತಿ ತರಿಸಿಕೊಡಿ : ನಾವು ನೋಡುತ್ತೇವೆ.

ಶ್ರೀ ಹೆಚ್. ಡಿ. ಬಸವರಾಜು : ನಾನು ಒಂದು ಸಲಹೆ ಕೊಡುವುದಕ್ಕೆ ಇಷ್ಟ ಪಡುತ್ತೇನೆ. ಕಾನ್ವೆಂಟ್ ಶಾಲೆಗಳು ಯಾವುದೇ ಆಗಲಿ, ಅನುದಾನರಹಿತ ಅಥವಾ ಅನುದಾನ ಪಡೆದುಕೊಳ್ಳುತ್ತಿರುವ ಶಾಲೆಗಳು ಯಾವುದೇ ಆಗಲಿ, ಅನುದಾನರಹಿತ ಅಥವಾ ಅನುದಾನ ಪಡೆದುಕೊಳ್ಳುತ್ತಿರುವ ಶಾಲೆಗಳು ಎಷ್ಟು ಮಿಸಲಾತಿ ಕೊಡುತ್ತಾರೆಂಬುದನ್ನು ನೋಟೀಸ್ ಬೋರ್ಡಿನಲ್ಲಿ ಹಾಕುವ ವ್ಯವಸ್ಥೆ ಮಾಡಬೇಕಾಗಿದೆ. ಏಕೆಂದರೆ ಇವರು ಅರ್ಜಿ ನಮೂನೆ ಕೊಡದೆ ಇರುವ ವ್ಯವಸ್ಥೆ ಬಹಳಷ್ಟು ವರ್ಷಗಳಿಂದ ಅನೂಚಾನವಾಗಿ ನಡೆದುಕೊಂಡು ಬಂದಿದೆ.

ಅಧ್ಯಕ್ಷರು : ಬೆಂಗಳೂರಿನಲ್ಲಿರುವ ಕಾನ್ವೆಂಟ್ ಶಾಲೆಯಲ್ಲಿರುವ ರಿಸರ್ವೇಷನ್ ಯಾರಿಗೆ ರಿಸರ್ವೇಷನ್ ಅಗತ್ಯವಿಲ್ಲ ಅವರೇ ತೆಗೆದುಕೊಂಡು ಅಡ್ಜಸ್ಟ್ ಮಾಡಿಕೊಂಡಿರುತ್ತಾರೆ. ರಿಸರ್ವೇಷನ್ ನಮ್ಮ ಮತ್ತು ನಿಮ್ಮ ಊರಿನ ಬಗ್ಗೆ ಯೋಚನೆ ಮಾಡೋಣ ಬೆಂಗಳೂರಿನವರಿಗೆ ಏತಕ್ಕೆ ರಿಸರ್ವೇಷನ್ ?

ಶ್ರೀ ಹೆಚ್. ಡಿ. ಬಸವರಾಜು : ಬೆಂಗಳೂರು ಬೇಡ ವಿರಾಜಪೇಟೆಗೆ ಬಂದರೆ ಅಲ್ಲಿ ಬಡವರು ಇದ್ದಾರೆ.

ಅಧ್ಯಕ್ಷರು : ಈಗ ಅವರದ್ದು ಮಾತನಾಡೋಣ ಅವರು ಮಾಹಿತಿ ತರಿಸಿಕೊಳ್ಳಲಿ.

ಶ್ರೀ ಹೆಚ್. ಡಿ. ಬಸವರಾಜು : ಇದನ್ನು ಕಡ್ಡಾಯ ಮಾಡಲಿ ಎಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಏಕೆಂದರೆ ಮೀಸಲಾತಿಯನ್ನು ಪ್ರಕಟ ಮಾಡಿದರೆ ಅದರಿಂದ ಸಾರ್ವಜನಿಕರಿಗೂ ಗೊತ್ತಾಗುತ್ತದೆ.

ಅಧ್ಯಕ್ಷರು : ಹೇಳಿದ್ದೀರಲ್ಲಾ ಬಿಡಿ. ಮಂತ್ರಿಗಳು ಮಾಹಿತಿ ತರಿಸಿಕೊಳ್ಳಲಿ.

ವಿಷಯ : ಬೀಳಗಿ ಮತಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಮಂಜೂರು

139 (1015)-ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1996-97ನೇ ಸಾಲಿನಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಿರುವಿರಿ ಎಂಬುದನ್ನು ಜಿಲ್ಲಾವಾರು ಮಾಹಿತಿ ಒದಗಿಸುವಿರಾ ?